



(6ನೇ ಪುಟದಿಂದ)

ಸಂದಿಗಳಲ್ಲೋ ಅಡಗಿ ಕುಳಿತು ಕ್ಷಣಾರ್ಧದಲ್ಲಿ ಬಾಲದ ಹಿಂದಿರುವ ಕೊಂಡಿಯ ಮುಳ್ಳಿನಿಂದ ಕುಟುಕಿ ವಿಷ ಹರಿಸಿಬಿಡುತ್ತವೆ.

ಚೇಳುಗಳು ಸಂಧಿಪದಿ ವಂಶದ ಅರ್ಯಾಕ್ನಿಡ್ ವರ್ಗಕ್ಕೆ ಸೇರಿವೆ. ಒಟ್ಟು 1400 ಪ್ರಭೇದಗಳು, ಉಪಪ್ರಭೇದಗಳಿವೆ. ಅಳಿವಿನಂಚಿನಲ್ಲಿರುವ 111 ಪ್ರಭೇದಗಳಿವೆ. 25 ಜಾತಿಯ ಚೇಳುಗಳಿಗೆ ಮನುಷ್ಯರನ್ನು ಕೊಲ್ಲುವಷ್ಟು ವಿಷದ ಪ್ರಮಾಣವುಂಟು.

ಚೇಳಿಗೆ ವಾಸನೆ ಕಂಡು ಹಿಡಿಯುವ ಇಕ್ಕಳದಂತಹ ಜೋಡಿ ನಖಗಳನ್ನು ನೋಡಬಹುದು. ಹಿಂದೆ ಸುರುಳಿಯಾಕಾರದ ಬಾಲವಿದೆ. ಅದರ ತುದಿಯಲ್ಲಿ ವಿಷದ ಮುಳ್ಳಿದೆ. ಇದರಿಂದ ಕುಟುಕಿ ವಿಷವನ್ನು ಬೇರೆ ಜೀವಿಗಳಿಗೆ ಸೇರಿಸಿ, ನಿಷ್ಕ್ರಿಯಗೊಳಿಸಿ ಭಕ್ಷಿಸುತ್ತವೆ. ಇಲ್ಲವೇ ಪಾರಾಗಲು ಬಳಸುವ ರಕ್ಷಣಾತ್ಮಕ ತಂತ್ರವಿದು. ಇದಕ್ಕೆ ಎಂಟು ಪಾದಗಳಿವೆ. ಆಯುಷ್ಯ ಅಂದಾಜು 4 ರಿಂದ 10 ವರ್ಷಗಳು ಎನ್ನಲಾಗಿದೆ.

ಪ್ರಪಂಚದ ಎಲ್ಲ ಖಂಡಗಳಲ್ಲೂ ಚೇಳುಗಳು ಕಂಡುಬರುತ್ತವೆ. ಇದುವರೆಗೆ ಅಂಟಾರ್ಕಟಿಕಾದಲ್ಲಿ ಪತ್ತೆಯಾಗಿಲ್ಲವಂತೆ. ಅತ್ಯಂತ ಎತ್ತರದ ಪರ್ವತ ಶಿಖರಗಳಲ್ಲೂ ಇವೆ.

ಚೇಳು ಪರಭಕ್ಷಕಗಳು. ಸಣ್ಣ ಕೀಟಗಳು, ಕೆಲವೊಮ್ಮೆ ಹಲ್ಲಿಗಳನ್ನೂ ಬೇಟೆಯಾಡುತ್ತವೆ. ಅದರ ಕೊಂಡಿಯ ಸುತ್ತಲೂ ಕೂದಲುಗಳಿವೆ. ಅದನ್ನು ಬೇಟೆ ಸ್ಪರ್ಶಿಸಿದಾಗ ಚೇಳಿಗೆ ಬಲಿಯಾಗುತ್ತವೆ. ಇವು ಹೆಚ್ಚಾಗಿ ದ್ರವರೂಪದ ಆಹಾರಕ್ಕೆ ಒತ್ತು ನೀಡುತ್ತವೆ. ಬೇಟೆಯನ್ನು ನಿಷ್ಕ್ರಿಯಗೊಳಿಸಿ ಅನಂತರ ನಿಧಾನವಾಗಿ ಅದರ ದ್ರವವನ್ನು ಹೀರಿಕೊಳ್ಳುತ್ತವೆ. ಒಂದೇ ಬಾರಿಗೆ ಅತ್ಯಧಿಕ ಆಹಾರವನ್ನು ಸೇವಿಸಬಲ್ಲವು. ಹಾಗೆಯೇ ಆರರಿಂದ ಹನ್ನೆರಡು ತಿಂಗಳು ಉಪವಾಸ ಇರಬಲ್ಲದು ಎಂದರೆ ನಿಜಕ್ಕೂ ಆಶ್ಚರ್ಯದ ಸಂಗತಿಯೇ!

ಇವು ಲೈಂಗಿಕ ಕ್ರಿಯೆಯಿಂದ ಸಂತಾನೋತ್ಪತ್ತಿ ನಡೆಸುತ್ತವೆ. ಫೆರೋಮೋನ್ಸ್ ರಾಸಾಯನಿಕದಿಂದ ಗಂಡು– ಹೆಣ್ಣು ಪರಸ್ಪರ ಗುರುತಿಸಿಕೊಳ್ಳುತ್ತವೆ. ಆಮೇಲೆ ನೃತ್ಯ ಆರಂಭಿಸುತ್ತವೆ. ದವಡೆ ಮುಂಭಾಗದ ಹಲ್ಲುಗಳ ಮೂಲಕ ಪರಸ್ಪರ ಚುಂಬಿಸುತ್ತವೆ. ಗಂಡು ತನ್ನ ಅಂಡಾಣುವನ್ನು ಹೆಣ್ಣಿನ ಜನನಾಂಗದ ಪರಿಧಿಯಲ್ಲಿ ಸೇರಿಸಿದ ಅನಂತರ ಅದಕ್ಕೆ ಮುಂದೇನು ಮಾಡಬೇಕೆಂದು ಮಾರ್ಗದರ್ಶನ ಮಾಡುತ್ತದೆ. ಸೇರುವಿಕೆ ಪೂರ್ಣಗೊಂಡ ಅನಂತರ ಗಂಡು– ಹೆಣ್ಣು ಬೇರ್ಪಡುತ್ತವೆ.

ಇವು ಅಂಡಜಗಳು. ಮರಿಗಳು ಅಂಡಾಣು ಮೊಟ್ಟೆಯಿಂದ ಒಂದರ ಹಿಂದೊಂದು ಹೊರ ಬರುತ್ತವೆ. ಇವು ತಾಯಿಯ ಬೆನ್ನ ಮೇಲೆ ಉಳಿದು ತೆವಳುವುದನ್ನು ಕಲಿಯುತ್ತವೆ. ತಾಯಿಯ ಮಾರ್ಗದರ್ಶನವಿಲ್ಲದೇ ಏನನ್ನೂ ಮಾಡುವುದಿಲ್ಲ. ಐದರಿಂದ ಏಳು ಬಾರಿ ರೂಪಾಂತರ ಹೊಂದಿ ಪ್ರೌಢಾವಸ್ಥೆ ತಲುಪುತ್ತವೆ. ಇದಕ್ಕೆ ಹೊಸ ರೂಪಾಂತರವೆಂದು ಕರೆಯುವರು.

ಇದರ ವಿಷದಲ್ಲಿ ಪ್ರೊಟೀನ್ ಅಂಶವಿದೆ. ಹೀಗಾಗಿಯೇ ಔಷಧಿ ತಯಾರಿಕೆಯಲ್ಲಿ ವಿಷವನ್ನು ಬಳಸುತ್ತಾರೆ. ಇದರಲ್ಲಿರುವ ಕ್ಲೋರೋಟಾಕ್ಸಿನ್ ಮೆದುಳಿನ ಕ್ಯಾನ್ಸರಿನಿಂದ ಹಾಳಾದ ಜೀವಕೋಶಗಳನ್ನು ಸರಿಪಡಿಸಬಲ್ಲದು. ಕೀಲುನೋವು, ಶಕ್ತಿವರ್ಧಕದಲ್ಲೂ ಈ ವಿಷದ ಉಪಯೋಗವಿದೆ.